ಕ್ರಿ. ಮಿಸ್ ನಂ. 270/2022                    ಪಿ ಡಬ್ಲ್ಯೂ   1

(ದಿನಾಂಕ 12-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
(ಅರ್ಜಿ ಮತ್ತು ತಕರಾರಿನಲ್ಲಿರುವ ಅಂಶವನ್ನು ಪರಿಗಣಿಸಲಾಯಿತು. ಉಭಯ ಪರ ವಕೀಲರು ಸಾಕ್ಷಿಯನ್ನು ಇನ್ ಕ್ಯಾಮೆರಾದಲ್ಲಿ ದಾಖಲಿಸಿಕೊಳ್ಳಲು ಕೋರಿರುತ್ತಾರೆ. ಅರ್ಜಿ ಮತ್ತು ತಕರಾರಿನ ಅಂಶಗಳನ್ನು ಪರಿಗಣಿಸಿ ಸಾಕ್ಷ್ಯ ಹೇಳಿಕೆಯನ್ನು ಇನ್ ಕ್ಯಾಮೆರಾದಲ್ಲಿ ದಾಖಲಿಸಿಕೊಳ್ಳುವುದು ಸೂಕ್ತವೆಂಬ ಅಭಿಪ್ರಾಯಕ್ಕೆ ಬಂದು ಸಾಕ್ಷಿಯನ್ನು ಇನ್ ಕ್ಯಾಮೆರಾದಲ್ಲಿ ದಾಖಲಿಸಿಕೊಳ್ಳಲಾಯಿತು.)
<u>ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಜೆ ಎನ್ ಕೆ ವಕೀಲರಿಂದಃ-</u>

3 ನೇ ಎದುರುದಾರನು ನನಗೆ ಮೈದುನನಾಗಬೇಕು. ನಾನು ಈ ಅರ್ಜಿಯನ್ನು ಎದುರುದಾರರ ಮೇಲೆ ಜೀವನಾಂಶ ಕೋರಿ ದಾಖಲಿಸಿರುತ್ತೇನೆ. ನನ್ನ ಗಂಡ ನನ್ನ ಮಾವನವರಿಗೆ 2 ನೇ ಮಗ. ನಾನು ಮತ್ತು ನನ್ನ ಗಂಡ ಚಿದಾನಂದ ಮದುವೆ ಪೂರ್ವದಲ್ಲಿ ಪ್ರೀತಿಸುತ್ತಿದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾವು ಹಿರಿಯರ ಒಪ್ಪಿಗೆ ಮೇರೆಗೆ ಮದುವೆಯಾಗಿದ್ದೇವೆ ಎನ್ನುತ್ತಾರೆ. ನಾನು ಮತ್ತು ಚಿದಾನಂದ ಪ್ರೀತಿಸಿರುತ್ತೇವೆ ಅದರ ಬಗ್ಗೆ ಇಬ್ಬರ ಮನೆಯವರು ಒಪ್ಪಿಗೆ ಸೂಚಿಸಿದ ನಂತರ ನಾವು ಹಿರಿಯರ ಸಮ್ಮುಖದಲ್ಲಿ ವಿವಾಹವಾಗಿರುತ್ತೇವೆ ಆದರೆ ಈಗ ನಾನು ಸುಳ್ಳು ಹೇಳುತಿತದ್ದೇನೆಂದರೆ ಸರಿಯಲ್ಲ. ನಾನು ಮತ್ತು ಚಿದಾನಂದ ಪ್ರೀತಿಸಿರುವುದರಿಂದ ಅದಕ್ಕೆ ನನ್ನ ಮಾವ ಒಪ್ಪಿಕೊಂಡು ಸುಮಾರು 2 ಲಕ್ಷ ಹಣ ಖರ್ಚು ಮಾಡಿ ನಮ್ಮ ವಿವಾಹವನ್ನು ಮಾಡಿಸಿರುತ್ತಾರೆಂದರೆ ಸರಿಯಲ್ಲ. ಮದುವೆಯನ್ನು ನನ್ನ ಮಾವ ಮಾಡಿರುವುದರಿಂದ ನನ್ನ ಗಂಡ ಮತ್ತು ನನ್ನ ಮಾವ ಯಾವುದೇ ವರದಕ್ಷಿಣೆಯನ್ನು ನಮ್ಮ ತವರುಮನೆಯಿಂದ ಪಡೆದಿಲ್ಲವೆಂದರೆ ಸರಿಯಲ್ಲ. ಅವರು ಯಾವುದೇ ರೀತಿಯಿಂದ ವರದಕ್ಷಿಣೆ ಪಡೆದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಗಂಡ ಮತ್ತು ನನ್ನ ಮಾವ ವರದಕ್ಷಿಣೆಯನ್ನು ತೆಗೆದುಕೊಂಡಿರುತ್ತಾರಂತಾ ನನ್ನ ಅರ್ಜಿ ಮತ್ತು ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆಸಿರುತ್ತೇನೆ. ಆ ರೀತಿ ನಾನು ಬರೆಸಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ಚಿದಾನಂದ್ ಇವರನ್ನು ಮದುವೆಯಾದ ನಂತರ ಸುಮಾರು 5 ವರ್ಷದ ಕಾಲ ಚಿದಾನಂದ್ ಇವರ ಜೊತೆ ನನ್ನ ಮಾವನ ಮನೆಯಲ್ಲಿ ಬಾಳುವೆ ಮಾಡಿರುತ್ತೇನೆ. ಆ ರೀತಿ ನಾನು ಬಾಳುವೆ ಮಾಡಿಲ್ಲ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಚಿದಾನಂದ್ ಇವರ ಜೊತೆ ನಾನು 2-3 ತಿಂಗಳ ಕಾಲ ಮಾತ್ರ ನನ್ನ ಮಾವನ ಮನೆಯಲ್ಲಿ ಬಾಳುವೆ ಮಾಡಿರುತ್ತೇನೆಂದರೆ ಸರಿಯಲ್ಲ.

ನಾನು ಅಲ್ಲಿದ್ದಾಗ ಆ 2-3 ತಿಂಗಳ ಅವಧಿಯಲ್ಲಿ ಎದುರುದಾರ ನಂ.1 ರಿಂದ 3 ಮತ್ತು ನನ್ನ ಅತ್ತೆ ಪಾರ್ವತಮ್ಮ ಇವರನ್ನು ನಿರ್ಲಕ್ಷಿಸಿರುತ್ತೇನೆ ಅವರಿಗೆ ದೇಕರಿಕೆ ಮಾಡಿಲ್ಲವೆಂದರೆ ಸರಿಯಲ್ಲ. ನಾನು ಅವರ ಜೊತೆ ವಿನಾಕಾರಣ ಜಗಳವನ್ನು ಸಹಾ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಆ ರೀತಿ ನಾನು ಗಲಾಟೆ ಮಾಡಿದಾಗ 1ನೇ ಎದುರುದಾರನು ನನಗೆ ಅನೇಕ ಸಾರಿ ಬುದ್ಧಿವಾದ ಸಹಾ ಹೇಳಿರುತ್ತಾರೆಂದರೆ ಸರಿಯಲ್ಲ. ಆ ರೀತಿ ಬುದ್ಧಿವಾದ ಹೇಳಿ ಸದರಿ 2-3 ತಿಂಗಳ ಅವಧಿಯಲ್ಲಿ ನನ್ನ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹೊಂದಾಣಿಕೆ ಮಾಡಿಕೊಂಡು ಹೋಗಲಿಲ್ಲವೆಂದರೆ ಸರಿಯಲ್ಲ. ಆ ರೀತಿ ನಾನು ಗಲಾಟೆ ಮಾಡಿ ಚಿದಾನಂದ್ ಇವರಿಗೆ ಒಳ್ಳೆಯ ಹೆಂಡತಿಯಾಗಲಿಲ್ಲ ಮತ್ತು ಎದುರುದಾರನ ಮನೆಗೆ ಒಳ್ಳೆ ಸೊಸೆ ಆಗಲಿಲ್ಲವೆಂದರೆ ಸರಿಯಲ್ಲ. ನನಗೆ ಯಾವುದೇ ಸಂತಾನ ಇರುವುದಿಲ್ಲ.

ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ ನಾನೇ ಮಾಹಿತಿ ನೀಡಿದ್ದೇನೆ. ಚಿದಾನಂದ ಮತ್ತು 1ನೇ ಎದುರುದಾರ ನನಗೆ ಹೊಂದಾಣಿಕೆ ಮಾಡಿಕೊಂಡು ಚೆನ್ನಾಗಿ ಬಾಳುವೆ ಮಾಡಿಕೊಂಡು ಹೋಗು ಅಂತಾ ಹೇಳಿದರೂ ಸಹಾ ನಾನು ಮನೆ ಬಿಟ್ಟು ಹೋಗಿರುತ್ತೇನೆಂದರೆ ಸರಿಯಲ್ಲ. ನಾನು ಮನೆ ಬಿಟ್ಟು ಹೋಗಿ ಪ್ರತ್ಯೇಕವಾಗಿ ವಾಸಿಸಲು ಪ್ರಾರಂಭಿಸಿದ್ದೆ ಎಂದರೆ ಸರಿಯಲ್ಲ. ನಾನು ಚಿದಾನಂದರನ್ನು ತೊರೆದು ಎದುರುದಾರನ ಮನೆಯನ್ನು ಬಿಟ್ಟು ನನ್ನ ತಂದೆ ತಾಯಿ ಮನೆಯಲ್ಲಿ ವಾಸವಾಗದೇ ಪ್ರತ್ಯೇಕವಾಗಿ ವಾಸವಾಗಿರುವುದರಿಂದ ನನಗೆ ಹೆಚ್ ಐ ವಿ ಖಾಯಿಲೆ ಬಂತು ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ ನನಗೆ ಖಾಯಿಲೆ ಬಂತು ನಾನು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಾನು ಪ್ರತ್ಯೇಕವಾಗಿ ವಾಸವಾಗಿರುವ ವಿಚಾರ ಎದುರುದಾರರಿಗೆ ತಿಳಿದು ಅವರು ನನ್ನ ಬಳಿ ಬಂದು ಮನೆಗೆ ಬಂದು ಬಾಳುವೆ ಮಾಡು ಅಂತಾ ಕೇಳಿಕೊಂಡರೆಂದರೆ ಸರಿಯಲ್ಲ. ನಂತರ ನಾನು ಒಪ್ಪಿ ಚಿದಾನಂದ ಇವರ ಜೊತೆ ಬಾಳುವೆ ಮಾಡಲು ಬಂದಿರುತ್ತೇನೆಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ಚಿದಾನಂದ್ ಇವರ ನಡುವೆಯಾದ ವೈವಾಹಿಕ ಸಂಬಂಧದಿಂದ ಚಿದಾನಂದ್ ಇವರಿಗೆ ಹೆಚ್ ಐ ವಿ ಖಾಯಿಲೆ ಬಂತು ಎಂದರೆ ಸರಿಯಲ್ಲ. ಮದುವೆಯಾಗುವ ಸಮಯದಲ್ಲಿ ಚಿದಾನಂದ್ ಇವರಿಗೆ ಹೆಚ್ ಐ ವಿ ಖಾಯಿಲೆ ಇತ್ತು.

ನಾನು ಮತ್ತು ಎದುರುದಾರರು ಹಾಗೂ ಚಿದಾನಂದ ಒಂದೇ ಊರಿನವರು ನಾನು ಅದೇ ಊರಿನಲ್ಲಿ ಹುಟ್ಟಿ ಬೆಳೆದಿದ್ದೇನೆಂದರೆ ಸರಿ. ಮದುವೆ ಪೂರ್ವದಲ್ಲಿ ನಾವು ಚಿದಾನಂದ್ ಇವರಿಗೆ ಏನಾದರೂ ಖಾಯಿಲೆ ಇತ್ತಾ ಎನ್ನುವುದರ ಬಗ್ಗೆ ನಾನು ತಿಳಿದುಕೊಂಡಿಲ್ಲ. ಅವನಿಗೆ ಆ ರೀತಿ

ಖಾಯಿಲೆ ಇದೆಯಾ ಇಲ್ಲವೆನ್ನುವುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಚಿದಾನಂದ ಮರಣದ ನಂತರ ಎದುರುದಾರರ ಮನೆಯಲ್ಲಿ ಬಂದು ಇರಲು ನನಗೆ ಕೇಳಿಕೊಂಡರು ಆದರೆ ನಾನು ಹೋಗಲಿಲ್ಲವೆಂದರೆ ಸಾಕ್ಷಿಯು ನಾನು ಹೋಗಿದ್ದೆ ಎನ್ನುತ್ತಾರೆ. ನಂತರದಲ್ಲಿ ನಾನು ಸುಮಾರು 2-3 ವರ್ಷ ಎದುರುದಾರನ ಮನೆಯಲ್ಲಿ ವಾಸವಾಗಿದ್ದೆ. ನನ್ನ ಗಂಡ ಡಿಸೆಂಬರ್ ತಿಂಗಳದಲ್ಲಿ ಮರಣ ಹೊಂದಿದ್ದಾರೆ ಅದು ಯಾವ ವರ್ಷ, ಎಷ್ಟು ವರ್ಷದ ಹಿಂದೆ ಮರಣಹೊಂದಿದ್ದಾರೆ, ಮರಣದ ನಿಖರ ದಿನಾಂಕ ನನಗೆ ಗೊತ್ತಿಲ್ಲ. ನಾನು ಚಿದಾನಂದ ಇವರ ಜೊತೆ ಮದುವೆಯಾದ ನಂತರ ಅವರ ಜೊತೆ ಬಾಳುವೆ ಮಾಡಿಲ್ಲ, ಎದುರುದಾರನ ಮನೆಯಲ್ಲಿ ವಾಸವಾಗಿಲ್ಲ, ಆದ್ದರಿಂದ ನನಗೆ ಮರಣದ ದಿನಾಂಕ ಹೇಳಲು ಬರುವುದಿಲ್ಲವೆಂದರೆ ಸರಿಯಲ್ಲ. ಚಿದಾನಂದ ಮರಣದ ನಂತರದಲ್ಲಿಯೂ ಸಹಾ ನಾನು ಎದುರುದಾರನ ಮನೆಯಲ್ಲಿ ವಾಸವಾಗಿರಲಿಲ್ಲವೆಂದರೆ ಸರಿಯಲ್ಲ. ನಾನು ನನಗೆ ಖಾಯಿಲೆ ಇರುವ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಮುಂದೆ ಹಾಜರುಪಡಿಸುತ್ತೇನೆ.

ಎದುರುದಾರನು ನನಗೆ ಮನೆಯಿಂದ ಹೊರಗೆ ಹಾಕಿದ ಬಗ್ಗೆ ನಾನು ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದೇನೆ. ಆ ಬಗ್ಗೆ ನಾನು ನ್ಯಾಯಾಲಯಕ್ಕೆ ದಾಖಲೆ ಹಾಜರು ಮಾಡಿಲ್ಲ. ಎದುರುದಾರರು ಮತ್ತು ಮೃತ ಚಿದಾನಂದ್ ನನಗೆ ಯಾವುದೇ ರೀತಿಯಿಂದ ನಿರ್ಲಕ್ಷ್ಯವನ್ನು ಮಾಡಿಲ್ಲ ಆದ್ದರಿಂದ ನಾನು ಯಾವುದೇ ದೂರನ್ನು ನೀಡಿಲ್ಲವೆಂದರೆ ಸರಿಯಲ್ಲ.

ಈ ಅರ್ಜಿ ದಾಖಲಿಸುವ ಪೂರ್ವದಲ್ಲಿ ನಾನು ಎದುರುದಾರರಿಗೆ ಯಾವುದೇ ವಕೀಲರ ನೋಟೀಸನ್ನು ನೀಡಿಲ್ಲ. ಎದುರುದಾರರು ವ್ಯವಸಾಯ ಮಾತ್ರ ಮಾಡುತ್ತಾರೆ ಬೇರೆ ಯಾವುದೇ ವ್ಯವಹಾರ ಮಾಡುವುದಿಲ್ಲವೆಂದರೆ ಸರಿ. ಎದುರುದಾರರಿಗೆ ವಾರ್ಷಿಕವಾಗಿ ರೂ.60 ಸಾವಿರ ಆದಾಯ ಬರುತ್ತದಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ವ್ಯವಸಾಯದಿಂದ ಬರುವ ಆದಾಯದಿಂದ ಎದುರುದಾರರ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲವೆಂದರೆ ಸರಿಯಲ್ಲ.

ಎದುರುದಾರರಿಗೆ ಎಷ್ಟು ಜಮೀನು ಇರುತ್ತದಂತಾ ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ನಾನು ಆ ರೀತಿ ಯಾವುದೇ ದಾಖಲೆಗಳನ್ನು

ಕ್ರಿ. ಮಿಸ್ ನಂ. 270/2022 ಪಿ ಡಬ್ಲ್ಯೂ 1

ಹಾಜರುಪಡಿಸಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆಧಾರ ಕಾರ್ಡಿನಲ್ಲಿ ನನ್ನ ಹೆಸರು ಎಂ.ಕಾವೇರಿ ತಂದೆ ಗಂಗಾಧರ.ಎಂ ಅಂತಾ ನಮೂದು ಇದೆ ಎಂದರೆ ಸಾಕ್ಷಿಯು ನಾನು ಅದನ್ನು ಬದಲಾವಣೆ ಮಾಡಿಸಿಕೊಂಡಿರುತ್ತೇನೆ ಎನ್ನುತ್ತಾರೆ. ಅದನ್ನು ನಾನು ಈ ದಾವೆ ದಾಖಲಿಸುವ ಸಮಯದಲ್ಲಿ ಬದಲಾವಣೆ ಮಾಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ನಿಪಿ-2 ಆಧಾರ ಕಾರ್ಡಿನಲ್ಲಿ ಕೇರಾಫ್ ವಿಳಾಸ ನಶೀಪುಡಿ ಚಿದಾನಂದ ಮಾತ್ರ ನಮೂದು ಇದೆ ಎಂದರೆ ಸರಿ. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಅದರಲ್ಲಿ ನಾನು ಇರುತ್ತೇನಂತಾ ಗುರುತಿಸಿದ್ದು ಅದನ್ನು ನಿಆರ್-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ಪೋಟೋವನ್ನು ತೋರಿಸಲಾಗಿ ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಅದರಲ್ಲಿ ನಾನು ಇರುತ್ತೇನಂತಾ ಗುರುತಿಸಿದ್ದು ಅದನ್ನು ನಿಆರ್-2 ಎಂದು ಗುರುತಿಸಲಾಯಿತು. ಸದರಿ ಪೋಟೋಗಳಲ್ಲಿ ಕಾಣುವ ವ್ಯಕ್ತಿ ಯಾರು ಎಂದರೆ ಸಾಕ್ಷಿಯು ನಾನು ನಮ್ಮ ಅಕ್ಕರ ಮನೆಗೆ ಹೋಗಿದ್ದೆ ಅಲ್ಲಿ ಒಬ್ಬ ಮಗುವಿನ ಹುಟ್ಟುಹಬ್ಬ ಇತ್ತು ಆ ಸಮಯದಲ್ಲಿ ಆ ಪೋಟೋಗಳನ್ನು ತೆಗೆದಿದ್ದಾರೆನ್ನುತ್ತಾರೆ.

(ಈ ಹಂತದಲ್ಲಿ ಎದುರುದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ